

# ಹತ್ತೂರು ಪ್ರಸಿದ್ಧ ಸುತ್ತೂರು ಜಾತ್ರೆ

ಹತ್ತೂರಿಗೂ ಬೇಕಾದ ಸುತ್ತೂರು ಜಾತ್ರಾ ಮಹೋತ್ಸವ ಇತ್ತೀಚಿನ ವರ್ಷಗಳಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ರಂಗು ಪಡೆಯುತ್ತಲೇ ಇದೆ. ಜನವರಿ 15ರಿಂದ 20ರವರೆಗೆ ಈ ಬಾರಿಯ 'ಅರಿವಿನ ದಾಸೋಹ'ದ ಸಂಭ್ರಮ.

■ ಎಂ. ಮಹೇಶ್



ಕೃಷಿ ಪ್ರಾತ್ಯಕ್ಷಿಕೆ

ಮೈಸೂರು ಸೀಮೆಯಲ್ಲಿ 'ಸುತ್ತೂರು ಜಾತ್ರೆ'ಗೆ ದೊಡ್ಡ ಹೆಸರಿದೆ. ಹತ್ತೂರಿಗೂ ಬೇಕಾದ ಈ ಮಹೋತ್ಸವಕ್ಕೆ ಇತ್ತೀಚಿನ ವರ್ಷಗಳಲ್ಲಿ ರಾಜ್ಯದಾದ್ಯಂತ ಭಕ್ತರು ಬರುವುದುಂಟು. ವಿದೇಶಿ ಅತಿಥಿಗಳೂ 'ಸಾಕ್ಷಿ'ಯಾಗುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ಹೆಚ್ಚಿನ ಭಕ್ತರನ್ನು ಸೆಳೆಯುತ್ತಿರುವ ಇದು, ಹೊಸ ಹೊಸ ಕಾರ್ಯಕ್ರಮಗಳಿಂದ ರಂಗು ಪಡೆಯುತ್ತಲೇ ಬಂದಿದೆ. ಈಗ ಅದು 'ಮಹೋತ್ಸವ' ರೂಪ ಪಡೆದು, ವೈವಿಧ್ಯಮಯ ಕಾರ್ಯಕ್ರಮಗಳಿಂದ ಮೇಳೈಸುತ್ತಿದೆ.

ನಾಡಿನ ಪ್ರಮುಖ ಮಠಗಳಲ್ಲಿ ಒಂದಾದ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠಕ್ಕೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟ ಶಿವರಾತ್ರೀಶ್ವರ ಶಿವಯೋಗಿಗಳ ಸ್ಮರಣೆಯಲ್ಲಿ ನಡೆಯುವ ಜಾತ್ರಾ ಮಹೋತ್ಸವ 'ಸುತ್ತೂರು ಜಾತ್ರೆ' ಎಂದೇ ಪ್ರಸಿದ್ಧಿ. ತ್ರಿವಿಧ ದಾಸೋಹಿಯನ್ನು ಅರಿವಿನ ದಾಸೋಹದ ಮೂಲಕ ಸ್ಮರಿಸುವ ವಾರ್ಷಿಕ ಕಾರ್ಯಕ್ರಮವೂ ಇದಾಗಿದೆ. ಈ ಬಾರಿ ಜನವರಿ 15ರಿಂದ 20ರವರೆಗೆ ನಡೆಯಲಿದೆ. ಅದಕ್ಕಾಗಿ ಸುತ್ತೂರು ಸುಕ್ಷೇತ್ರ ಮದುವಣಗಿತ್ತಿಯಂತೆ ಸಜ್ಜುಗೊಂಡಿದೆ. ವಿದ್ಯುದ್ದೀಪಗಳಿಂದ ಕಂಗೊಳಿಸುತ್ತಿದೆ.

### ಚಿಕ್ಕ ಭಾರತ

ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಜೀವನಾಡಿಯಾಗಿರುವ ಕಪಿಲಾ ನದಿ ತಟದಲ್ಲಿರುವ ಸುಕ್ಷೇತ್ರದಲ್ಲಿ ಜಾತ್ರೆಯ ಸಂದರ್ಭದಲ್ಲಿ 'ಚಿಕ್ಕದಾದ ಭಾರತ'ವೇ ನಿರ್ಮಾಣಗೊಳ್ಳುತ್ತದೆ. ಸಂಸ್ಕೃತಿ, ಸಂಸ್ಕಾರ, ಶಿಕ್ಷಣ, ಜಾಗೃತಿ, ನೆಲದ ಜೀವನಕ್ರಮ, ಹಳ್ಳಿಯ ಸೊಗಡು, ತಂತ್ರಜ್ಞಾನದ